ಶ್ರೀ ಎಂ. ಗಂಗಣ್ಣ.— ನನ್ನ (ಉ) ಪ್ರಶ್ನೆಗೆ ಉತ್ತರವಾಗಿ ರಾಯಚೂರು ಮತ್ತು ಹುಬ್ಬಳ್ಳಿ ಎಂದು ಹೇಳಿದ್ದೀರಿ. ಆ ಬಗ್ಗೆ ಕೇಂದ್ರದ ಮಂತ್ರಿಗಳು ಸಹ ಬೆಂಗಳೂರಿಗೆ ಬಂದಾಗ ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ, ಆ ಬಗ್ಗೆ ರಾಜ್ಯ ಸರ್ಕಾರ ಒತ್ತಾಯ ಮಾಡಿದೆಯೇ ಇಲ್ಲವೇ ಎಂಬುದನ್ನು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ಫೀಡರ್ ಸರ್ವೀಸನ್ನು ಪ್ರಾರಂಭಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಒಂದು ವಿಶೇಷ ಸಂಸ್ಥೆಯನ್ನು ನೇಮಿಸಿದ್ದಾರೆ ಅವರು ಇದನ್ನು ಪ್ರಾರಂಭಿಸಬೇಕು. ಹುಬ್ಬಳ್ಳಿ ಮತ್ತು ರಾಯಚೂರು ನಡುವೆ ಪ್ರಾರಂಭಿಸುವ ಬಗ್ಗೆ ಅವರು ತೀರ್ಮಾನಿಸಿದ್ದಾರೆ. ಯಾವಾಗ ಪ್ರಾರಂಭ ಮಾಡುತ್ತಾರೆಂಬುದು ಗೊತ್ತಿಲ್ಲ. ಆದಷ್ಟು ಬೇಗ ಮಾಡಬೇಕೆಂಬ ಒತ್ತಾಯವನ್ನು ನಾವು ಕೇಂದ್ರ ಸರ್ಕಾರದ ಮೇಲೆ ಪುನಃ ತರುತ್ತೇವೆ.

ಶ್ರೀ ಎಂ. ಗಂಗಣ್ಣ.—ರಾಜ್ಯದಲ್ಲಿ ಉಪಯೋಗದಲ್ಲಿರತಕ್ಕ ೭ ವಿಮಾನ ನಿಲ್ದಾಣಗಳು ಯಾವುವು?

ಶ್ರೀ ಕಾಗೋಡು ತಿಮ್ಮಪ್ಪ.— ಕೇಂದ್ರ ಸರ್ಕಾರದ ಕೈಯಲ್ಲಿರತಕ್ಕ ವಿಮಾನ ನಿಲ್ದಾಣಗಳ ಪೈಕಿ ಹಾಸನ, ಕೋಲಾರ, ಬಳ್ಳಾರಿ ಇವು ಮಾತ್ರ ಉಪಯೋಗಕ್ಕೆ ಬರುತ್ತಿವೆ. ರಾಜ್ಯ ಸರ್ಕಾರದ ಕೈಯಲ್ಲಿರತಕ್ಕ ಜಕ್ಕೂರು, ಗಿಣಿಗೇರ, ರಾಯಚೂರು ಇವುಗಳ ಪೈಕಿ ಜಕ್ಕೂರು ಸರ್ವೀಸ್‌ನಲ್ಲಿದೆ, ಗಿಣಿಗೇರ ಮತ್ತು ರಾಯಚೂರಿನಲ್ಲಿ ಸ್ವಲ್ಪ ಉಪಯೋಗ ಮಾಡುವುದರ ಮೂಲಕ 'ಆಪರೇಷನ' ಮಾಡುವುದಕ್ಕೆ ಯೋಚಿಸಿದ್ದೇವೆ.

ಶ್ರೀ ವಿ. ಎಲ್. ಶಿವಪ್ಪ.— ಫೀಡರ್ ಸರ್ವೀಸಿಗೆ ದಾವಣಗೆರೆ ಕೂಡ ಸೇರಿದೆ ಎಂದು ಪತ್ರಿಕೆಯಲ್ಲಿ ಓದಿದೆ, ಅದು ನಿಜವೇ ? ಸೇರದಿದ್ದರೆ, ಸರ್ಕಾರ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತದೆಯೆ

ಶ್ರೀ ಕಾಗೋಡು ತಿಮ್ಮಪ್ಪ.—ಸಧ್ಯಕ್ಕೆ ಅದು ಸೇರಿಲ್ಲ. ಮುಂದೆ ಸೇರಿಸುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಡಿ. ಟಿ. ರಾಮು.— ಸಾಮಾನ್ಯ ನಿಲ್ದಾಣಕ್ಕೂ ಬಯಲು ವಿಮಾನ ನಿಲ್ದಾಣಕ್ಕೂ ಇರುವ ವ್ಯತ್ಯಾಸ ಏನು ?

ಶ್ರೀ ಕಾಗೋಡು ತಿಮ್ಮಪ್ಪ.— ಬಯಲು ವಿಮಾನ ನಿಲ್ದಾಣ ಎಂದರೆ ಕಟ್ಟಡ ಪಗ್ಯೆರೆ ಇರುವುದಿಲ್ಲ ಸಾಮಾನ್ಯ ವಿಮಾನ ನಿಲ್ದಾಣದಲ್ಲಿ ಎಲ್ಲ ವ್ಯವಸ್ಥೆಗಳು ಇರುತ್ತವೆ.

ಶ್ರೀ ಎಂ. ಗಂಗಣ್ಣ.—ಗಿಣಿಗೇರ ಐತಿಹಾಸಿಕ ಪ್ರಸಿದ್ಧ ಸ್ಥಳ. ಪಕ್ಕನಲ್ಲೇ ಹಂಪೆ, ಐಹೊಳೆ, ಪಟ್ಟದಕಲ್ಲು, ಬಾದಾಮಿ ಎಲ್ಲ ಬರುತ್ತವೆ. ಅಲ್ಲಿಗೆ ವಿದೇಶಿಯರು ಆಗಾಗ್ಗೆ ಬರುತ್ತಿರುತ್ತಾರೆ. ಆದುದರಿಂದ ರಾಯಚೂರು ಮತ್ತು ಗಿಣಿಗೇರ ನಡುವೆ ಫೀಡರ್ ಸರ್ವೀಸನ್ನು ಪ್ರಾರಂಭಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ....ರಾಯಚೂರು ಮತ್ತು ಹುಬ್ಬಳ್ಳಿಗೆ ಫೀಡರ್ ಸರ್ವೀಸನ್ನು ಮಂಜೂರ್ಮಾಡುವಾಗ ತಜ್ಞರು ಬಂದು ಎರಡು ಸ್ಥಳಗಳನ್ನು ನೋಡಿ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ರಾಜ್ಯ ಸರ್ಕಾರ ತನಗೆ ಬೇಕಾದ ಕಡೆ ಹೇಳಬಹುದು, ಆದರೆ ಅಂತಿಮವಾಗಿ ತೀರ್ಮಾನ ಮಾಡತಕ್ಕವರು ಸಂಬಂಧಪಟ್ಟ ಕೇಂದ್ರದ ತಜ್ಞರು. ಅವರು ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿದ ನಂತರ ಮತ್ತೆ ಅದನ್ನು ಬದಲಾವಣೆ ಮಾಡಬೇಕೆಂದರೆ ಅನವಶ್ಯಕವಾಗಿ ವಿಳಂಬವಾಗಬಹುದು. ಆದುದರಿಂದ, ಮಂಜೂರಾಗಿರತಕ್ಕದನ್ನು ತೀವ್ರವಾಗಿ ಪ್ರಾರಂಬಿಸುವುದಕ್ಕೆ ಒತ್ತಾಯಿಸುತ್ತೇವೆ.

Kaveri Water Supply Scheme to Mandya Town

742 SRI M. S. ATMANANDA (Mandya).— Will the Minister for Housing and Urban Development be pleassd to state.—

(a) whether it has come to the notice of the Government that the scheme for supplying water from Cauveri river to mandya City has been sanctioned.

(b) if so when this scheme would be started and when it woul be completed.

SRI DHARAM SINGH. (Minister for Housing and Urban Develop ment)--

(a) Yes

(b) The work of the Scheme was started during the yea 1976-77. A programme has been chalked out for completing th scheme during the year 1982-83.

ಶ್ರೀ ಎಂ. ಎಸ್. ಆತ್ಮಾನಂದ.—ಮಂಡ್ಯ ನಗರದ ಕಾವೇರಿ ನೀ ಸರಬರಾಜು ಯೋಜನೆಯ ಅಂದಾಜು ಮೊಬಲಗೆಷ್ಟು ಮತ್ತು ಈ ಯೋಜನೆಗೆ ಸರ್ಕಾರ ಇಲ್ಲಿಯವರೆಗೆ ಎಷ್ಟು ಹಣವನ್ನು ನೀಡಿದೆ ಎಲ್.ಐ.ಸಿ. ಯಿಂದ ಮತ್ತು ನಗರ ಸಭೆಯ ವತಿಯಿಂದ ಎಷ್ಟು ಹಣ ಬಂದಿದೆ?

ಶ್ರೀ ಧರ್ಮಸಿಂಗ್,—ಮಂಡ್ಯ ನಗರಕ್ಕೆ ಕಾವೇರಿ ನೀರು ತರುವ ಯೋಜನೆಗೆ ೨೬೫ ಲ ರೂಪಾಯಿಯ ಒಟ್ಟು ಅಂದಾಜು ಮಾಡಲಾಗಿತ್ತು. ಅದರಲ್ಲಿ ಈಗಾಗಲೇ ನಾವು ೧೭೨ ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಿದ್ದೇವೆ. ಎಲ್.ಐ.ಸಿ. ಯಿಂದ ೧೬೩ ಲಕ್ಷ ರೂಪಾಯಿ ಬರಬೇಕಾದುದ ಬಂದಿದೆ. ಸರ್ಕಾರದಿಂದ ಸಿ.ಎಂ.ಸಿ. ಕೊಡಬೇಕಾದ ೧೨೨ ಲಕ್ಷದಲ್ಲಿ ಈಗಾಗಲೇ ೪೮ ಲಕ್ಷ ರೂಪಾಯಿ ಗಳನ್ನು ಒದಗಿಸಲಾಗಿದೆ. ಕೆಲಸ ಕೂಡ ಬಿರುಸಿನಿಂದ ಸಾಗುತ್ತಿದೆ, ಮತ್ತು ೧೯೮೩ರ ಮಾರ್ಚ್ ಅಂತ್ ದೊಳಗೆ ಅದನ್ನು ಪೂರ್ಣಗೊಳಿಸುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ.—೧೯೮೩ರೊಳಗೆ ಆ ಯೋಜನೆಯನ್ನು ಪೂರ್ಣಗೊಳಿಸುತ್ತೇ ವೆಂದು ಹಿಂದೆ ಇದೇ ಸದನದಲ್ಲಿ ಆಶ್ವಾಸನೆ ನೀಡಲಾಗಿತ್ತು. ಆದರೆ ಅದು ಕಾರ್ಯಗತವಾಗಲಿಲ್ಲ. ದಯ ಮಾಡಿ ಈಗಲಾದರೂ ಅಂದರೆ ೧೯೮೩-೮೪ರಲ್ಲಿ ಸಾಕಷ್ಟು ಹಣ ಒದಗಿಸಿ ಆ ಕಾರ್ಯಕ್ರಮವನ್ನು ಪೂರ್ಣ ಗೊಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ಈಗಾಗಲೇ ನಾವು ಇಂಟಕ್‌ವೆಲ್ ಮತ್ತು ಜಾಕ್‌ವೆಲ್ ಅನ್ನು ಹಾಗೂ ಪಂಪುಸೆಟ್ಟುಗಳನ್ನು ಪೂರ್ಣ ಮಾಡಿದ್ದೇವೆ. ಪಂಪಿಂಗ್ ಮೆಷಿನರಿ ಎರೆಕ್ಷನ್ ಆಗಿದೆ. ೬ ಓವರ್ ಹೆಡ್ ಟ್ಯಾಂಕುಗಳು ಪೂರ್ಣವಾಗಿವೆ. ಡಿಸ್ಟ್ರಿಬ್ಯೂಷನ್‌ಗೆ ನಮಗೆ ಕಲ್ಕತ್ತದಿಂದ ಪೈಪುಗಳು ಬರಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದ ಮಂತ್ರಿಗಳಿಗೆ ಹೇಳಿದ ಮೇಲೆ ೨೫ ಲಕ್ಷ ರೂಪಾಯಿನ ಪೈಪು ಗಳು ಬಂದಿದೆ. ಅವರು ಪ್ರೈಯಾರಿಟಿ ಮೇಲೆ ಕೊಡುತ್ತಾರೆ. ಪೈಪುಗಳು ಬರುವುದು ನಿಧಾನವಾ ದುದರಿಂದ ಈ ರೀತಿಯಾಯಿತು. ನಾವು ಈ ಯೋಜನೆ ಬಗ್ಗೆ ಬಹಳ ಪ್ರಗತಿಪರವಾಗಿ ಕೆಲಸ ಮಾಡಿದೆವು ಆದರೆ ಪೈಪುಗಳು ಒರುವುದು ನಿಧಾನವಾದದ್ದರಿಂದ ಸ್ವಲ್ಪ ವಿಳಂಬವಾಯಿತು. ಈಗ ಪೈಪುಗಳು ಬರು ತ್ತಿವೆ, ಅವು ಬಂದಹಾಗೆ ಕೆಲಸ ಆಗುತ್ತದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಈ ಮೂರೂ ಕೆರೆಗಳನ್ನು ವಿಶ್ವಬ್ಯಾಂಕಿನ ನೆರವಿನಿಂದ ಮಾಡಬೇಕೆಂದು ಸರ್ಕಾರ ಯಾವಾಗ ತೆಗೆದುಕೊಂಡಿತು?

ಶ್ರೀ ಎಂ, ಎಂ. ಜೆ. ಸದ್ಯೋಜಾತ.—ಡೇಟನ್ನು ಒದಗಿಸಿಕೊಡುತ್ತೇನೆ.

ಶ್ರೀ ಎಚ್. ಡಿ. ಕೃಷ್ಣಪ್ಪ.—ಇಂತಿಂತಹ ಕಾಮಗಾರಿಗಳನ್ನು ವಿಶ್ವಬ್ಯಾಂಕಿನ ನೆರವಿನಿಂದಲೇ ಮಾಡಬೇಕು ಅಥವಾ ಸರ್ಕಾರದ ಬೊಕ್ಕಸದಿಂದ ಮಾಡಬೇಕೆನ್ನತಕ್ಕ ನಿರ್ಣಯವೇನನ್ನು ತೆಗೆದುಕೊಳ್ಳುವು ದಕ್ಕೆ ಏನಾದರೂ ಆಧಾರ ಮಾರ್ಗಸೂಚಿಯನ್ನು ಇಟ್ಟುಕೊಂಡಿದ್ದೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಹೌದು.

ಶ್ರೀ ಎಚ್. ಟಿ. ಕೃಷ್ಣಪ್ಪ. -ಅವುಗಳನ್ನು ತಿಳಿಸಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಗೈಡಲೈನ್ಸ್ ಬೇಕಾದರೆ ಅವುಗಳನ್ನು ಒದಗಿಸಿಕೊಡು ತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸಚಿವರಿಂದ ಸರಿಯಾದ ಉತ್ತರ ಇಲ್ಲ. ಕೆರೆಗಳನ್ನು ಆಯವ್ಯಯ ಪಟ್ಟಿಯಲ್ಲಿ ಯಾವತ್ತು ಸ್ವಾಮಿ ಸೇರಿಸಿದ್ದು?

SRI M. M. J. SADYOJATHA.—The estimate in respect of new Gudikallahalla Tank is ready. The work will be taken up during this year only. Regarding new tanks near Kalinganahalli Halla and Bindenahalli, works will be commenced after getting clearance by the Dam safety Panel and Minor Irrigation Committee and after administrative approval of the Government.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈ ಕಾಮಗಾರಿಗಳನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದು ಯಾವಾಗ? ಏಕೆಂದರೆ ಕೆಲವಾರು ಕಾಮಗಾರಿಗಳು ಆಯವ್ಯಯ ಪಟ್ಟಿಯಲ್ಲಿ ಬರುತ್ತವೆ, ಕೆಲಸ ಪ್ರಾರಂಭ ಆಗುವುದಿಲ್ಲ. ವಿಶ್ವ ಬ್ಯಾಂಕಿನ ನೆರವೆಂದು ಹೇಳಿ ಸೇರಿಸಿಬಿಟ್ಟಿರಿ. ಅಲ್ಲಿಂದ ಯಾವ ನೆರವು ಇಲ್ಲ ಕೆಲಸ ಪ್ರಾರಂಭವಾಗಿಲ್ಲ. ಇನ್ನಾದರೂ ಸರ್ಕಾರದಿಂದ ಹಣ ಕೊಟ್ಟು ಕೆಲಸ ಮಾಡಿಸಿದರೆ ನಾವು ಸ್ವಲ್ಪ ನೆಮ್ಮದಿಯಿಂದ ಉಸಿರಾಡಬಹುದು. ಇಷ್ಟು ವಿಳಂಬಕ್ಕೆ ಕಾರಣ ಏನು?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ವಿವರಗಳನ್ನು ತರಿಸಿಕೊಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ವಿಶ್ವಬ್ಯಾಂಕಿನ ನೆರವಿಗಾಗಿ ಕಾಯ್ದು ಕಾಮಗಾರಿಗಳ ಅಂದಾಜು ಮೌಲ್ಯ ವಿಳಂಬದಿಂದ ಹೆಚ್ಚಾಗುವುದರಿಂದ ಅವುಗಳ ಮಂಜೂರಾತಿ ವಿಳಂಬವಾಗುತ್ತದೆ. ದಯಮಾಡಿ ವಿಶ್ವಬ್ಯಾಂಕಿನ ನೆರವಿನಿಂದ ಈ ಕೆಲಸಗಳನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ವಿಶ್ವಬ್ಯಾಂಕ್ ನೆರವಿನಿಂದ ಹಿಂದಿನ ವರ್ಷ ಎಷ್ಟು ಹಣ ಬಿಡುಗಡೆಯಾಗಿ ಎಷ್ಟು ಹಣ ಖರ್ಚಾಗಿದೆ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ವಿವರ ನನ್ನಲ್ಲಿ ಇಲ್ಲ, ಬೇಕಾದರೆ ಒದಗಿಸಿ ಕೊಡುತ್ತೇನೆ

ಶ್ರೀ ಪಿ. ಎನ್. ರೆಡ್ಡಿ.—ವಿಶ್ವ ಬ್ಯಾಂಕಿನ ನೆರವಿನಿಂದ ಹೋದವರ್ಷ ಒಂದಾದರೂ ಕೆರೆಯನ್ನು ಕಟ್ಟಿ ಪೂರೈಸಿದ್ದೀರಾ ಅಥವಾ ಕಾಮಗಾರಿ ಕೆಲಸ ಪ್ರಾರಂಭವಾಗಿದೆಯೇ ಪ್ರಾರಂಭವಾಗಿದ್ದರೆ ಎಷ್ಟು ಜಾಗ್ರತೆ ಅವುಗಳನ್ನು ಮುಗಿಸುತ್ತೀರಿ

ಶ್ರೀ ಎಂ. ಎಂ. ಜೆ. ಸದ್ಯೋಜಾತ. —ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ವಿವರವನ್ನು ಒದಗಿಸಿ ಕೊಡುತ್ತೇನೆ,

MR. SPEAKER.—Question 275 the Hon. Minister for Social Welfare and Backward Classes in not here, the question is held over,

Lift Irrigation Scheme in Hadagali Taluk.

966 SRI N. KAKIBASAVANA GOWDA (Hadagali)— Will the Minister for Transport and Minor Irrigation be pleased to state.—

(a) whether it is a fact that inordinate delay in completing of Lift Irrigation Schemes in Hadagali taluk namely Mylara Stage I & II and Bannimatti Mylara, though they were started 6 to 8 years back causing much inconvenience to atchkatdars of about 3000 acres

(b) if so, the reasons for the delay in completing the said schemes.